4. ವರದಿಗಳನ್ನೊಪ್ಪಿಸುವುದು:

ಅಧ್ಯಕ್ಷರು : (ಅಧ್ಯಕ್ಷರು, ನಿಯಮಾವಳಿ ಸಮಿತಿ) 2009–10ನೇ ಸಾಲಿನ ನಿಯಮಾವಳಿ ಸಮಿತಿಯ ಮೊದಲನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಯನ್ನು ಒಪ್ಪಿಸಲಾಯಿತು.

ಅಧ್ಯಕ್ಷರು : (ಅಧ್ಯಕ್ಷರು, ವಿಶೇಷ ಸದನ ಸಮಿತಿ): ವಿಧಾನ ಸಭಾ ಸದಸ್ಯರಾದ ಶ್ರೀ ವೈ.ಸಂಪಂಗಿ ಅವರ ಪ್ರಕರಣಕ್ಕೆ ಸಂಬಂಧಪಟ್ಟ ವಿಶೇಷ ಸದನ ಸಮಿತಿಯ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಯನ್ನು ಒಪ್ಪಿಸಲಾಯಿತು.

ಶ್ರೀ ಕೆ. ರಘುಪತಿ ಭಟ್ (ಉಡುಪಿ): ಮಾನ್ಯ ಅಧ್ಯಕ್ಷರೆ, 2008–09ನೇ ಸಾಲಿನ ಅಧೀನ ಶಾಸನ ರಚನಾ ಸಮಿತಿಯ 37ನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಒಪ್ಪಿಸಲಾಯಿತು.

ಡಾ: ಎ.ಬಿ. ಮಾಲಕರೆಡ್ಡಿ (ಯಾದಗಿರಿ): ಮಾನ್ಯ ಅಧ್ಯಕ್ಷರೆ, 2008–09ನೇ ಸಾಲಿನ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ 26ನೇ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಒಪ್ಪಿಸಲಾಯಿತು.

5. ನಿಲುವಳಿ ಸೂಚನೆಯ ಅಡಿಯಲ್ಲಿ ನಿಯಮ 69ರ ಮೇಲೆ ಚರ್ಚೆ:

ವಿಷಯ: ರಾಜ್ಯದಲ್ಲಿ ವಿದ್ಯುತ್ ಅಭಾವದಿಂದ ಉಂಟಾಗಿರುವ ಸಮಸ್ಯೆಗಳು

ಶ್ರೀ ಸಿದ್ದರಾಮಯ್ಯ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈ ರಾಜ್ಯದ ಜನರು ಅನುಭವಿಸುತ್ತಿರುವಂಥ ಒಂದು ತೀವ್ರವಾದ ಸಮಸ್ಯೆಯ ಬಗ್ಗೆ ಬಹಳ ಜರೂರಾದಂಥ ವಿಷಯವನ್ನು ಚರ್ಚೆ ಮಾಡುವುದಕ್ಕೆ ನಿಯಮ 69 ಅಡಿಯಲ್ಲಿ ಒಂದು ನೋಟೀಸ್ ಅನ್ನು ತಮಗೆ ಕೊಟ್ಟಿದ್ದೇನೆ. ಇವತ್ತಿನ ಬೇರೆಲ್ಲಾ ಕಲಾಪಗಳನ್ನು ಬದಿಗೊತ್ತಿ ನಾನು ಇವತ್ತು ನೋಟೀಸ್ ಮೂಲಕ ತಮ್ಮಲ್ಲಿ ಏನು ಮನವಿಯನ್ನು ಮಾಡಿಕೊಂಡಿದ್ದೇನೆ ಎಂದರೆ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಕಣ್ಣಾಮುಚ್ಚಾಲೆ ಆಡುತ್ತಿದೆ, ಈ ಹಿಂದೆಯೂ ಕೂಡ ವಿದ್ಯುತ್ ಅಭಾವ ಬಹಳ ಇತ್ತು. ಇದು ಅನೇಕ ವರ್ಷಗಳಿಂದ ಇದೆ. ಇತ್ತೀಚಿನ ದಿವಸಗಳಲ್ಲಿ ಇದರ ತೀವ್ರತೆ ಬಹಳ